**ದಿನಾಂಕ 13-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1ನೇ ಪ್ರತಿವಾದಿಯ ಪರ ಶ್ರೀಮತಿ ಹೆಚ್. ಪಿ.ಎಂ., ವಕೀಲರಿಂದಃ**

7. ಜಮೀನಿನ ಸರ್ವೆ ನಂಬ್ರ ನನಗೆ ಗೊತ್ತಿಲ್ಲ. ಜಮೀನು ಕಾಪು ಗ್ರಾಮದಲ್ಲಿ ಇದೆ. ಜಮೀನು ಅಗ್ರಿಕಲ್ಚರ್ ಲ್ಯಾಂಡ್ ಆಗಿರುತ್ತದೆ. ನನ್ನ ಅತ್ತೆ 20 ಸೆಂಟ್ಸ್ ಜಮೀನನ್ನು ವ್ಯವಸಾಯೇತರ ಜಮೀನನ್ನಾಗಿ ಪರಿವರ್ತಿಸಿರುವುದು ನನಗೆ ಗೊತ್ತಿಲ್ಲ. ಜಮೀನಿನ ಆರ್.ಟಿ.ಸಿ ನನ್ನ ಬಳಿ ಇಲ್ಲ. ಜಮೀನಿನ ಆರ್.ಟಿ.ಸಿ.,ಯನ್ನು ನಾನು ಎಂದೂ ಕೂಡ ತೆಗೆದುಕೊಂಡಿಲ್ಲ. ನಾನು ಮಾರ್ಚ್ 2023 ರಲ್ಲಿ ಆರ್.ಟಿ.ಸಿಯನ್ನು ತೆಗೆದುಕೊಂಡಿರುತ್ತೇನೆ. ನಾನು ರಿಜಿಸ್ಟ್ರಾರ್ ಆಫೀಸಿನಿಂದ ಪಡೆದುಕೊಂಡಿರುತ್ತೇನೆ. ಸರ್ವೆ ನಂಬ್ರ ಗೊತ್ತಿಲ್ಲದೇ ಇದ್ದ ಮೇಲೆ ಹೇಗೆ ಆರ್.ಟಿ.ಸಿ.,ಯನ್ನು ತೆಗೆದುಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವಕೀಲರಾದ ವಿಜಯ ಕುಮಾರ್ ನಮಗೆ ಆರ್.ಟಿ.ಸಿ.,ಯನ್ನು ತಗೆದುಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ನನ್ನ ಅತ್ತೆ ಮಾಡಿದ ವ್ಯವಸ್ಥಾ ಪತ್ರ ನನ್ನ ಅತ್ತೆಯ ಬಳಿಯೇ ಇತ್ತು. ನಾನು ಸಬ್ ರಿಜಿಸ್ಟ್ರಾರ್ ಕಛೇರಿಯಿಂದ ಸದರಿ ವ್ಯವಸ್ಥಾ ಪತ್ರದ ಪ್ರತಿಯನ್ನು ಪಡೆದಿರುತ್ತೇನೆ. ನನ್ನ ಅತ್ತೆಗೆ ಕನ್ನಡದಲ್ಲಿ ಹಿಡಿತವಿದ್ದಷ್ಟೇ ಇಂಗ್ಲೀಷ್ ಭಾಷೆಯಲ್ಲಿ ಹಿಡಿತವಿತ್ತು ಎಂದರೆ ಸರಿ. ನನ್ನ ಅತ್ತೆಗೆ ವ್ಯವಹಾರಿಕ ಜ್ಞಾನ ಇತ್ತು ಎಂದರೆ ಸರಿ. ನನ್ನ ಅತ್ತೆ ವ್ಯವಹಾರ ಮಡಾಬೇಕಾದರೆ ಓದಿ ತಿಳಿದುಕೊಂಡು ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಯಾವುದೇ ಪತ್ರಕ್ಕೆ ಸಹಿ ಮಾಡಬೇಕಾದರೆ ಮೊದಲು ಓದಿ ತಿಳಿದುಕೂಂಡು ಸಹಿ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು, ಅವರು ಮಾಹಿತಿಯನ್ನು ನಮ್ಮ ಜೊತೆ ಹಂಚಿಕೊಳ್ಳುತ್ತಿದ್ದರು ಎಂದು ತಿಳಿಸಿರುತ್ತಾರೆ.

8. ನಾನು ನನ್ನ ಅತ್ತೆಯ ಸಹಿಯನ್ನು ನೋಡಿದೆರ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಅದರಲ್ಲಿ ಕಾಣಿಸಿರುವ ಸಹಿ ನನ್ನ ಅತ್ತೆಯದ್ದಲ್ಲ ಎಂದು ತಿಳಿಸಿರುತ್ತಾರೆ. ಸದರಿ ದಾಖಲೆ ಜೆರಾಕ್ಸ್ ಪ್ರತಿಯಾದ

ಕಾರಣ ನಿಶಾನೆಯಾಗಿ ಮಾಡಿಲ್ಲ, ಆದರೆ ಸದರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿದ್ದರಿಂದ ಅದು ಜನರಲ್ ಪವರ್ ಆಫ್ ಅಟರ್ನಿಯಾಗಿದ್ದು, ಅದನ್ನು ಕಡತದಲ್ಲಿ ಇಡಲಾಯಿತು. ನನ್ನ ಅತ್ತೆ ಸಹಿ ಮಾಡಿದಂತ ದಾಖಲೆಗಳು ನಮ್ಮ ಬಳಿ ಇವೆ ಎಂದರೆ ಸರಿಯಲ್ಲ. ನನ್ನ ಅತ್ತೆ ಯಾವ ರೀತಿ ಸಹಿ ಮಾಡುತ್ತಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನನ್ನ ಅತ್ತೆ ತೀರಿಕೊಳ್ಳುವ ಸಮಯದಲ್ಲಿ ಅವರಿಗೆ 60 ವರ್ಷಕ್ಕಿಂತ ಕಡಿಮೆ ವಯಸ್ಸಾಗಿತ್ತು. ನನ್ನ ಅತ್ತೆ ತೀರಿಕೊಂಡಾಗ ನನ್ನ ಅತ್ತೆಯ ಮಗಳು ಅಂದರೆ ನನ್ನ ನಾದಿನಿ ಲಿಜಿ ಕಾಸ್ಟಲಿನೋ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದರು.

9. ನನ್ನ ಅತ್ತೆ ಮಾಡಿದ ವ್ಯವಸ್ಥಾ ಪತ್ರದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ಅತ್ತೆ ವ್ಯವಸ್ಥಾ ಪತ್ರ ಮಾಡಿದ್ದಾರೆ ಎಂದು 2023 ರ ಫೆಬ್ರುವರಿಯಲ್ಲಿ ಗೊತ್ತಾಯಿತು. ನನ್ನ ಅತ್ತೆ ಮಾಡಿರುವ ವ್ಯವಸ್ಥಾ ಪತ್ರ ನನ್ನ ಯಜಮಾನರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಕಡೆಯದಾಗಿ ನಾವು ದಾವಾ ಆಸ್ತಿಯ ಬಳಿ ಫೆಬ್ರುವರಿ 2023 ಕ್ಕೆ ಹೋಗಿರುತ್ತೇವೆ. 1 ನೇ ಪ್ರತಿವಾದಿ ಗಂಡ ಗ್ರೆಗರಿ ಕಾಸ್ಟಲಿನೋ ತೀರಿಕೊಂಡಾಗ ನಾವು ಅಂತ್ಯ ಸಂಸ್ಕಾರಕ್ಕೆ ಬರಲಿಲ್ಲ ಕಾರಣ ಅವರು ತಕ್ಷಣ ತೀರಿಕೊಂಡಿದ್ದರಿಂದ ನಾವು ಬರಲು ಆಗಲಿಲ್ಲ. 1 ನೇ ಪ್ರತಿವಾದಿ ಗಂಡನ ಜೊತೆ ವಿಭಾಗದ ಬಗ್ಗೆ ನಾವು ಮಾತನಾಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಗಂಡನ ಜೊತೆ ಯಾವಾಗ ಭಾಗ ಕೊಡಿ ಎಂದು ಕೇಳಿದ್ದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ನಾವು ಭಾರತಕ್ಕೆ ಬಂದು ಊರಿಗೆ ಬಂದಾಗಲೆಲ್ಲಾ ಭಾಗ ಕೊಡಿ ಎಂದು ಕೇಳುತ್ತಿದ್ದೆವು ಎಂದು ತಿಳಿಸಿರುತ್ತಾರೆ.

10. ದಾವಾ ಆಸ್ತಿಯಲ್ಲಿ ಈ ಮೊದಲು ಹೆಂಚಿನ ಮನೆ ಇತ್ತು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಸಣ್ಣ ಹೆಂಚಿನ ಮನೆ ಮಾತ್ರ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಅರ್ಧ ಒಡೆದು ಅವರು ಆರ್.ಸಿ.ಸಿ ಕಟ್ಟಡ ಕಟ್ಟಿದರು ಎಂದು ತಿಳಿಸಿರುತ್ತಾರೆ. ಆರ್.ಸಿ.ಸಿ ಯನ್ನು ಗ್ರೆಗರಿ ಕಾಸ್ಟಲಿನೋ ಕಟ್ಟಿದ್ದರು ಎಂದರೆ ಸರಿ. ಗ್ರೆಗರಿ ಕಾಸ್ಟಲಿನೋ ಸಿವಿಲ್ ಇಂಜಿನಿಯರ್ ಆಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಗಂಡ

ಗ್ರೆಗರಿ ಕಾಸ್ಟಲಿನೋ ಸಾಧು ಸ್ವಭಾವದ ಮನುಷ್ಯ ಎಂದರೆ ಸರಿಯಲ್ಲ. ಜೆಸ್ಟಿನ್ ಕಾಸ್ಟಲಿನೋ ರವರ ಕಡೆಯ ಮಗ ಗ್ರೆಗರಿ ಕಾಸ್ಟಲಿನೋ ಎಂದರೆ ಸರಿ. ಅವರು ಅವರ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಮತ್ತು ತಾಯಿಯ ಜೊತೆ ಪ್ರೀತಿ ವಾತ್ಸಲ್ಯದಿಂದ ಇದ್ದರು ಎಂದರೆ ಸರಿ. ಅದೇ ರೀತಿ ಅವರು ಯಾರಾದರೂ ಸಹಾಯ ಕೇಳಿದರೆ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ.

11. ನನ್ನ ಗಂಡ ಮೊದಲು ನಾನು ಈ ಮೊದಲು ಹೇಳಿದ ಕಂಪನಿಯಲ್ಲದೆ ಬೇರೆ ಕಂಪಯಲ್ಲಿಯೂ ಕೂಡ ಎ.ಸಿ ಮೆಕ್ಯಾನಿಕ್ ಆಗಿದ್ದರು ಎಂದರೆ ಸರಿ. ಸದರಿ ಕಂಪನಿಯಲ್ಲಿ ಎಷ್ಟು ವರ್ಷಗಳ ಕಾಲ ಎ.ಸಿ ಮೆಕ್ಯಾನಿಕ್ ಆಗಿ ನನ್ನ ಗಂಡ ಕೆಲಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ, ಕಾರಣ ಅದು ನನ್ನ ಮದುವೆಗಿಂತ ಮೊದಲು ಕೆಲಸ ಮಾಡುತ್ತಿದ್ದರು ಎಂದು ತಿಳಿಸಿರುತ್ತಾರೆ. ನಾನು ಮದುವೆ ಆಗುವ ಸಮಯದಲ್ಲಿ ನನ್ನ ಗಂಡ ದುಬೈಯಲ್ಲಿ ಬೇರೆ ಕಂಪನಿಯಲ್ಲಿ ಎ.ಸಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮದುವೆ ನಂತರ ನನ್ನ ಗಂಡ ಕೆಲಸವನ್ನು ಬಿಟ್ಟು ಇಲ್ಲಿಗೆ ಬಂದರು ಎಂದರೆ ಸರಿ. ಒಂದು ವರ್ಷಗಳ ಕಾಲ ನನ್ನ ಗಂಡ ಊರಿನಲ್ಲಿಯೇ ಇದ್ದರು ಎಂದರೆ ಸರಿ. ಆ ಸಮಯದಲ್ಲಿ 1 ನೇ ಪ್ರತಿವಾದಿ ಗಂಡ ಗ್ರೆಗರಿ ಕಾಸ್ಟಲಿನೋ ದುಬೈಯಲ್ಲಿ ಒಂದು ಸ್ವಂತ ಕನ್ಸ್ಟ್ರಕ್ಷನ್ ಕಂಪನಿ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಅವರು ಬೇರೆಯವರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿಸಿರುತ್ತಾರೆ. ಅವರು ದುಬೈಯಲ್ಲಿ ಕಟ್ಟಡ ಕಟ್ಟಿಸುವ ಕೆಲಸ ಮಾಡುತ್ತಿದ್ದರು ಎಂದರೆ ನನಗ ಗೊತ್ತಿಲ್ಲ. ಸ್ಟ್ಯಾನಿ ಕಾಸ್ಟಲಿನೋ ಪುನಃ ದುಬೈಗೆ ಹೋಗಲು ಅವರ ತಮ್ಮ ಗ್ರೆಗರಿ ಕಾಸ್ಟಲಿನೋ ರವರ ಸಹಾಯ ಪಡೆದಿದ್ದರು ಎಂದರೆ ಸರಿ. ಅದೇ ರೀತಿ ಸ್ಟ್ಯಾನಿ ಕಾಸ್ಟಲಿನೋ ಸರ್ವಿಸ್ ಕಂಪನಿ ತೆರೆಯಲು ಗ್ರೆಗರಿ ಕಾಸ್ಟಲಿನೋ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಸ್ವಲ್ಪ ಸಹಾಯ ಮಾಡಿದ್ದರು, ಸಂಪೂರ್ಣವಾಗಿ ಎಲ್ಲಾ ಸಹಾಯ ಮಾಡಿಲ್ಲ ಎಂದು ತಿಳಿಸಿರುತ್ತಾರೆ. ಸ್ಟ್ಯಾನಿ ಕಾಸ್ಟಲಿನೋಗೆ ಸಂಪೂರ್ಣ ಬಿಸಿನೆಸ್ ಅನ್ನು ಸೆಟ್ ಅಪ್ ಮಾಡಿಕೊಟ್ಟಿದ್ದು ಗ್ರೆಗರಿ ಕಾಸ್ಟಲಿನೋ ಎಂದರೆ ಸರಿಯಲ್ಲ. ಸ್ಟ್ಯಾನಿ ಕಾಸ್ಟಲಿನೋ ಅವರ ಜೀವಿತ ಅವಧಿಯ

ವರೆಗೆ ಸದರಿ ಸಂಸ್ಥೆಯನ್ನು ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸ್ಟ್ಯಾನಿ ಕಾಸ್ಟಲಿನೋ ಯಾವ ವರ್ಷದಿಂದ ಸಂಸ್ಥೆಯನ್ನು ನಿಲ್ಲಿಸಿದರು ಅಥವಾ ಬಂದ್ ಮಾಡಿದರು ಎಂದು ನನಗೆ ನೆನಪಿಲ್ಲ.

12. ನಾನು ಸ್ವಂತ ಬಿಸಿನೆಸ್ ಅನ್ನು ಆ ಸಮಯದಲ್ಲಿ ಹೊಂದಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ನಾನು ಆಗ ಗೃಹಿಣಿ ಆಗಿದ್ದೆ ಎಂದು ತಿಳಿಸಿರುತ್ತಾರೆ. ಈಗ ನಾನು ಸ್ವಂತ ಉದ್ಯಮ ಸ್ಥಾಪಿಸಿದ್ದೇನೆ ಎಂದರೆ ಸರಿ. ನಾನು ಈಗ ಮೆಯಿಂಟೆನೆನ್ಸ್ ಕಂಪನಿ ನಡೆಸುತ್ತಿದ್ದೇನೆ. ನನ್ನ ಯಜಮಾನರು ನಡೆಸುತ್ತಿದ್ದ ಸಂಸ್ಥೆಯ ಲೈಸೆನ್ಸ್ ಅಡಿಯಲ್ಲಿ ನಾನು ಮೆಯಿಂಟೆನೆನ್ಸ್ ಕಂಪೆನಿ ತೆರೆದಿಲ್ಲ. ಬಂದ ಲಾಭದಲ್ಲಿ ನಾನು ನನ್ನ ಭಾಗದ ಭಾಗಾಂಶವನ್ನು ಪಡೆಯುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಅದು ಸಂಪೂರ್ಣ ನಷ್ಟವಾಗಿದೆ ಎಂದು ತಿಳಿಸಿರುತ್ತಾರೆ. ನನ್ನ ಚಿಕ್ಕ ಮಗ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ದೊಡ್ಡ ಮಗ ಉದ್ಯೋಗದಲ್ಲಿ ಇರುತ್ತಾನೆ. ನನ್ನ ದೊಡ್ಡ ಮಗ ಜರ್ಮನಿಯಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ನಮ್ಮ ಕುಟುಂಬದ ಈಗ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ಕುಟುಂಬದ ಎಂದರೆ ಸರಿ. ನನ್ನ ಗಂಡ ಇರುವಾಗ ಕೂಡ ಆರ್ಥಿಕವಾಗಿ ಅಭಿವೃದ್ಧಿ ಆಗಿದ್ದ ಕುಟುಂಬ ಎಂದರೆ ಸರಿ.

13. ಗ್ರೆಗರಿ ಕಾಸ್ಟಲಿನೋ ಉದ್ಯೋಗ ಬಿಟ್ಟು ಅವರ ತಾಯಿಯ ಜೊತೆ ಬಂದು ವಾಸವಾಗಿದ್ದರು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಅವರಿಗೆ ಉದ್ಯೋಗದಿಂದ ತೆಗೆದು ಹಾಕಿದ್ದರಿಂದ ಅವರು ಭಾರತಕ್ಕೆ ಬಂದು ಅವರ ತಾಯಿಯ ಜೊತೆ ವಾಸಿಸುತ್ತಿದ್ದರು ಎಂದು ತಿಳಿಸಿರುತ್ತಾರೆ. ಯಾವ ಕಾರಣಕ್ಕಾಗಿ ಗ್ರೆಗರಿ ಕ್ಯಾಸ್ಟಲಿನೋರವರನ್ನು ಉದ್ಯೋಗದಿಂದ ತೆಗೆದು ಹಾಕಿದರು ಎಂದು ನನಗೆ ಗೊತ್ತಿಲ್ಲ. ಗ್ರೆಗರಿ ಕಾಸ್ಟಲಿನೋ ಊರಿಗೆ ಬಂದ ನಂತರ ಅವರ ತಾಯಿ ಅಂದರೆ ನನ್ನ ಅತ್ತೆಯ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಅವರ ಆಸ್ತಿಯನ್ನು ಅವರ ಕಿರಿಯ ಪುತ್ರ ಜೊಸೆಫಿನ್ ಕ್ಯಾಸ್ಟಲಿನೋರವರಿಗೆ ಕೊಡಬೇಕೆಂಬ ಇಚ್ಚೆಯಿತ್ತು ಎಂದರೆ ಸರಿಯಲ್ಲ. ಗ್ರೆಗರಿ ಕಾಸ್ಟಲಿನೋ ಮತ್ತು 1 ನೇ ಪ್ರತಿವಾದಿ, ನನ್ನ ಅತ್ತೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಗ್ರೆಗರಿ ಕ್ಯಾಸ್ಟಲಿನೋ ರವರಿಗೆ ದಾವಾ

ಸ್ವತ್ತನ್ನು ಬಿಟ್ಟರೆ ಬೇರೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಗ್ರೆಗರಿ ಕ್ಯಾಸ್ಟಲಿನೋರವರಿಗೆ ಶಿರ್ವದಲ್ಲಿ ಒಂದು ವಾಣಿಜ್ಯ ಕಟ್ಟಡ ಇರುತ್ತದೆ. ಕಾಪು ಮತ್ತು ಮಣಿಪಾಲದಲ್ಲಿಯೂ ಕೂಡ ಆಸ್ತಿ ಇರುತ್ತದೆ. ಅವರು ಅವರ ಸ್ವಂತ ದುಡಿಮೆಯಿಂದ ಸದರಿ ಆಸ್ತಿಯನ್ನು ಸಂಪಾದಿಸಿದ್ದರು ಎಂದರೆ ಇರಬಹುದು ಎಂದು ತಿಳಿಸಿ ತದನಂತರ ಸರಿಯಲ್ಲ ಎಂದು ತಿಳಿಸಿರುತ್ತಾರೆ.

14. ದಾವೆಯನ್ನು ಹಾಕಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ವಾದ ಪತ್ರವನ್ನು ಸಲ್ಲಿಸಲು ಅದರಲ್ಲಿರುವ ಒಕ್ಕಣೆಯನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಬಂದು ವಕಾಲತ್ತು ಮತ್ತು ವಾದ ಪತ್ರಕ್ಕೆ ಸಹಿ ಮಾಡಿ ಹೋಗಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ವ್ಯವಸ್ಥಾ ಪತ್ರ ಮಾಡಲು ನನ್ನ ಗಂಡ ಮತ್ತು ನನ್ನ ಗಂಡನ ಸಹೋದರಿಗೆ ಮಾಹಿತಿ ಇತ್ತು ಮತ್ತು ಸಮ್ಮತಿ ಇತ್ತು ಎಂದರೆ ಸರಿಯಲ್ಲ. ನನ್ನ ಅತ್ತೆ ಜನರಲ್ ಪವರ್ ಆಫ್ ಅಟರ್ನಿಯನ್ನು ಕೂಡ ಕೊಡುವಾಗ ನನ್ನ ಗಂಡ ಮತ್ತು ನನ್ನ ಗಂಡನ ಸಹೋದರಿಗೆ ಮಾಹಿತಿ ಇತ್ತು ಮತ್ತು ಅವರ ಸಮ್ಮತಿ ಇತ್ತು ಎಂದರೆ ಸರಿಯಲ್ಲ. ಆ ರೀತಿ ಸಮ್ಮತಿ ಇದ್ದುದರಿಂದ ಸ್ಟಾನಿ ಕ್ಯಾಸ್ಟಲಿನೋ ಮತ್ತು ಲಿಜಿ ಕ್ಯಾಸ್ಟಲಿನೋರವರು ಇಲ್ಲಿಯವರೆಗೂ ದಾವೆಯನ್ನು ಹಾಕಲಿಲ್ಲ ಎಂದರೆ ಸರಿಯಲ್ಲ.

15. ದಾವಾ ಆಸ್ತಿ ಈಗ 1 ಮತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ. ಅದನ್ನು ಯಾವುದೇ ಪ್ರಾಧಿಕಾರದಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನಮಗೆ ಗೊತ್ತಿರಲಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರಿದು, ನಮಗೆ ಈಗಲೇ ಗೊತ್ತಾಯಿತು ಎಂದು ತಿಳಿಸಿರುತ್ತಾರೆ. 2023 ರಲ್ಲಿ ಗೊತ್ತಾದ ನಂತರ 1 ರಿಂದ 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುವ ಖಾತೆಯನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು, ನಾವು ಕೇಸನ್ನು ಹಾಕಿದ್ದೇವೆ ಎಂದು ತಿಳಿಸಿರುತ್ತಾರೆ.

16. ದಾವಾ ಆಸ್ತಿಯ ಮೇಲೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಇರುವ ಸಾಲದ ಬಗ್ಗೆ ನನಗೆ ಗೊತ್ತಿಲ್ಲ. ಆರ್.ಟಿ.ಸಿ.,ಯಲ್ಲಿ ಸಾಲ ಕಾಣಿಸಿರುವ ಬಗ್ಗೆ ನನಿಮ್ಮ ಗಮನಕ್ಕೆ ಬರಲಿಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿತ್ತು, ಅದಕ್ಕಾಗಿಯೇ ನಾನು ಕೇಸನ್ನು ಹಾಕಿದೆ ಎಂದು ತಿಳಿಸಿರುತ್ತಾರೆ. ಬ್ಯಾಂಕಿನವರು ಸಾಲ ಕೊಟ್ಟ ಬಗ್ಗೆ ನಾನು ಬ್ಯಾಂಕಿಗೆ ಅರ್ಜಿಯನ್ನು ಕೊಟ್ಟಿಲ್ಲ. ಸಾಕ್ಷಿ ಮುಂದುವರಿದು, ಸಾಲವನ್ನು ಕೇಸ್ ಹಾಕುವ  ಮೊದಲೇ ಪಡೆದಿದ್ದರಿಂದ ಮತ್ತು ಅದು ಗೊತ್ತಾಗದೇ ಇದ್ದುದರಿಂದ ತಕರಾರು ಕೊಡಲಿಲ್ಲ ಎಂದು ತಿಳಿಸಿರುತ್ತಾರೆ.

17. ದಾವಾ ಸ್ವತ್ತಿನಲ್ಲಿ 10 ಸೆಂಟ್ಸ್ ಜಾಗ ರೋಜಿ ಪಿರೇರಾರವರಿಗೆ ಮಾರಾಟ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟವಾದ ಬಗ್ಗೆ ನಾನು ತಿಳಿದುಕೊಂಡಿಲ್ಲ ಆದರೆ ಆರ್.ಟಿ.ಸಿ ತೆಗೆದುಕೊಂಡಾಗ ನನಗೆ ಗೊತ್ತಾಯಿತು. ದಾವಾ ಆಸ್ತಿಯಲ್ಲಿ ಎರಡು ಮನೆಗಳು ಇರುತ್ತದೆ. ಮತ್ತೊಂದು ಮನೆ ಯಾರದ್ದು ಎಂದು ನಾನು ಕೇಳಿಲ್ಲ. 10 ಸೆಂಟ್ಸ್ ಜಾಗ ರೋಜಿ ಪಿರೇರಾರವರಿಗೆ ಮಾರಾಟವಾದ ವಿಚಾರ ಗೊತ್ತಿದ್ದರೂ ಕೂಡ ಮತ್ತು ಅಲ್ಲಿ ಅವರು ಮನೆ ಕಟ್ಟುತ್ತಿದ್ದ ವಿಚಾರ ಗೊತ್ತಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಾಗದ ಪಕ್ಕದಲ್ಲಿ ದಾವಾ ಸ್ವತ್ತಿಗೆ ಹೋಗಲು ರಸ್ತೆ ಹೋಗಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ರಸ್ತೆಯಿಂದ ಹೋಗಲು ರಸ್ತೆ ಮಾಡಲು ಉಪಯೋಗಿಸಿದ ಜಾಗವನ್ನು ಪಂಚಾಯತಿಗೆ 1 ನೇ ಪ್ರತಿವಾದಿ ಬಿಟ್ಟುಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ನನ್ನ ಅತ್ತೆ ಅವರ ಮಗನಿಗೆ ವ್ಯವಸ್ಥಾ ಪತ್ರದ ಮುಖೇನ ಆಸ್ತಿಯನ್ನು ಕೊಟ್ಟಿರುವುದನ್ನು ನಾನು ಪ್ರಶ್ನಿಸಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಸಾಯುವ ಸಮಯದಲ್ಲಿ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಗ್ರೆಗರಿ ಕ್ಯಾಸ್ಟಲಿನೋ ದಾವಾ ಸ್ವತ್ತಿನ ಮಾಲೀಕರಾಗಿ ಅನುಭವಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಗ್ರೆಗರಿ ಕ್ಯಾಸ್ಟಲಿನೋರವರು ಅವರ ತಾಯಿ ಬದುಕ್ಕಿದ್ದಾಗಲೇ ದಾವಾ ಸ್ವತ್ತನ್ನು ಸಂಪೂರ್ಣ ಮಾಲೀಕರಾಗಿ ಅನುಭವಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಗ್ರೆಗರಿ ಕ್ಯಾಸ್ಟಲಿನೋ ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳು ವಾರೀಸುದಾರ ನಾತೆಯ

ಆಧಾರದ ಮೇಲೆ ಮಾಲೀಕರಾಗಿ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಲಿಜಿ ಕ್ಯಾಸ್ಟಲಿನೋರವರಿಗಾಗಲಿ ಮತ್ತು ಸ್ಟ್ಯಾನಿ ಕ್ಯಾಸ್ಟಲಿನೋರವರಿಗಾಗಲಿ ಅಥವಾ ನಮಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಲಿಜಿ ಕ್ಯಾಸ್ಟಲಿನೋರವರ ತಾಯಿಯ ಅಂತ್ಯಸಂಸ್ಕಾರಕ್ಕೆ ಬಂದಿಲ್ಲದಿದ್ದರೂ ಕೂಡ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಿಜಿ ಕ್ಯಾಸ್ಟಲಿನೋ, ಸ್ಟ್ಯಾನಿ ಕ್ಯಾಸ್ಟಲಿನೋರವರು ಗ್ರೆಗರಿ ಕ್ಯಾಸ್ಟಲಿನೋ ಬದುಕಿರುವಾಗ ಭಾಗವನ್ನು ಕೇಳಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ವಕಿಲರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**
**4 ಮತ್ತು 5 ನೇ ಪ್ರತಿವಾದಿಗಳು ಮತ್ತು ಅವರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.